# ತುತ್ತಿನ ಚೀಲ

ಭಾರತದಲ್ಲಿ ದಿನದ ಒಪ್ಪೊತ್ತಿಗೂ ಅನ್ನ ಸಿಗದ, ಬಡತನದ ರೇಖೆಗಿಂತ ಕೆಳಗೆ ಇರುವ ಸುಮಾರು 65 ಲಕ್ಷಕ್ಕೂ ಹೆಚ್ಚು ಮಕ್ಕಳು ಇದ್ದಾರೆ ಎಂದು ಒಂದು ಅಂಕಿಅಂಶ ಹೇಳುತ್ತಿದೆ. ಬಡ ಮಕ್ಕಳಿಗೆ ಅನ್ನ ಸಿಗದಂತೆ ದೇವರು ವಿಧಿಸಿರಬಹುದಾದ ಶಿಕ್ಷೆಯೇ ಇದು! ಇರಲಾರದು ದೇವರು ಅಷ್ಟೊಂದು ಕಠಿಣ ಹೃದಯಿ ಅಲ್ಲ! ನಡೆಯುವ ಕಾಲಿಗೆ ಜೋಮು ಹಿಡಿದರೆ ಕೆಲ ಹೊತ್ತಿನ ನಂತರ ಸರಿಹೋಗಬಹುದು! ಆದರೆ ಯೋಚಿಸಬೇಕಾದ ಬುದ್ಧಿಗೆ ಜೋಮು ಹಿಡಿದರೆ! ಈ ಸಂಗತಿಗಳು ನಮ್ಮೆಲ್ಲರನ್ನೂ ಕಲಕುವ ಸಂಗತಿಯಾಗಬೇಕಿತ್ತು! ಆದರೆ ಇದಕ್ಕೆ ಬದಲಾಗಿ ಯಾರದೋ ಶ್ರೀಮಂತ ಕುಟುಂಬದ ಮದುವೆ ಕಾರ್ಯಕ್ರಮಗಳು, ಅವರ ಆಹಾರ, ಉಡುಗೆತೊಡುಗೆ, ಆಭರಣ, ಅವರು ಬಳಸುವ ವೈಭವೋಪೇತ ವಾಹನಗಳು ಇವೆಲ್ಲವೂ ಬಡವರ ಬದುಕನ್ನೇ ಅಪಹಾಸ್ಯ ಮಾಡುವಷ್ಟರ ಮಟ್ಟಿಗೆ ವರ್ಣಿಸಲ್ಪಡುತ್ತಿವೆ.

ಇಂತಹ ಕಠೋರ ಸ್ಥಿತಿಯನ್ನೇ ಬೇಂದ್ರೆ ‘ಕೂಸುಗಳಿಗೆ ಹಾಲು ಇಲ್ಲ, ಪಶುಬಲಿಯೇ ನಡೆದಿದೆ/ ಕಾಳು ಇದೆ ಕೂಳು ಇಲ್ಲ, ಹಣದ ಹುಚ್ಚು ಹಿಡಿದಿದೆ/ ಕತ್ತಲಲ್ಲಿ ಬೆಳಕೆ ಇಲ್ಲ, ಜಗಕೆ ಬೆಂಕಿ ಹತ್ತಿದೆ/ ಎಲ್ಲ ಇದೆ ಎಲ್ಲಿ ಇಲ್ಲ, ಇಲ್ಲೇ ಸುತ್ತುಮುತ್ತಿದೆ...’ ಎಂದು ಪ್ರಶ್ನಿಸಿದ್ದರು. ಆದರೆ ಈಗ ಕಾರ್ಲ್ ಮಾರ್ಕ್ಸ್ ಹೇಳುವ ಮನುಷ್ಯನ ಮಾನಸಿಕ ಗುಲಾಮಿತನ ಭಾಷೆಗೂ ಆವರಿಸಿದಂತೆ ಕಾಣುತ್ತಿದೆ. ಅದಕ್ಕೇ ಈಗ ಪ್ರಶ್ನಿಸುವ ಕವಿಗಳು, ಚಳವಳಿಗಳು ಮೌನವಾಗಿವೆ. ಹೌದು, ಈಗ ಭಾರತ ಬದಲಾಗಿದೆ!

ರಾಮಮನೋಹರ ಲೋಹಿಯಾ ಅವರು 50ರ ದಶಕದಲ್ಲೇ ಇಂತಹ ಅದ್ದೂರಿ ವಿವಾಹಗಳ ಬಗ್ಗೆ ದನಿಯೆತ್ತಿದ್ದರು. ‘ಬದುಕು ಎಷ್ಟೊಂದು ಅಸಹನೀಯವಾಗಿಬಿಟ್ಟಿದೆಯೆಂದರೆ, ಇವತ್ತು ಸಮಾಜದ ಮುಂಚೂಣಿಯಲ್ಲಿರುವವರು ಬರೀ ಲಗ್ನಪತ್ರಿಕೆಗಾಗಿ ಐವತ್ತು ಸಾವಿರ ಖರ್ಚು ಮಾಡುತ್ತಾರೆ. ಮದುವೆಯಾಗಲಿರುವ ಎರಡು ಜೀವಿಗಳು ಸಾಧಿಸಬೇಕಾದ ಆತ್ಮಗಳ ಮಿಲನದಲ್ಲಿ ವ್ಯಕ್ತವಾಗಬೇಕಾದ ಒಂದು ವಿವಾಹದ ಘನತೆ ಹಾಗೂ ವೈಭವ ಇಪ್ಪತ್ತು ಲಕ್ಷ ರೂಪಾಯಿಗಳ ನೆಕ್‌ಲೇಸಿನಲ್ಲೋ, ಐವತ್ತು ಸಾವಿರ ಸೀರೆಗಳಲ್ಲೋ ವ್ಯಕ್ತವಾಗುತ್ತಿದೆ’ ಎಂದು ನೊಂದು ಹೇಳಿದ್ದರು. ಮಾನವತೆಯನ್ನೇ ಅಣಕಿಸುವಂತಹ ಇಂತಹ ಸಮಾರಂಭಗಳು ಭಾರತಕ್ಕೆ ಕೀರ್ತಿ ಅಥವಾ ಅಪಕೀರ್ತಿ ಎರಡನ್ನೂ ತರಬಹುದು! ಇವು ಬಡವರು ಹಾಗೂ ನಿರ್ಗತಿಕರನ್ನು ಪ್ರತ್ಯೇಕಗೊಳಿಸುತ್ತವೆ. ಇವು ನಿರ್ಮಿಸುವ ಅಸಹ್ಯಕರ ಪ್ರತ್ಯೇಕತೆಗೆ ರಾಜಕಾರಣ ಹಾಗೂ ಅನೀತಿಯುಕ್ತ ವ್ಯವಹಾರಗಳ ಕೊಡುಕೊಳುಗೆಗಳ ಅನೈತಿಕ ಬೆಂಬಲವೂ ಇರುತ್ತದೆ. ಇದರ ಅರ್ಥ ಶ್ರೀಮಂತರನ್ನು ವಿರೋಧಿಸುವುದು ಎಂದಲ್ಲ! ಅವರಿಗೂ ಮತ್ತು ಬಡವರಿಗೂ ಆರೋಗ್ಯಕರವಾದ, ಮಾನವತೆಯಿಂದ ಕೂಡಿರುವ ಲಾಭಗಳಿಲ್ಲದ ಪರಿಶುದ್ಧ ಸಂಬಂಧವನ್ನಾಗಿ ಪರಿವರ್ತಿಸುವುದು. ಇದು ಎಲ್ಲರನ್ನೂ ಒಳಗೊಳ್ಳುವ ಗಾಂಧೀಜಿಯವರ ಉದಾರವಾದಿ ಚಿಂತನೆಯಾಗಿತ್ತು. ಹೀಗಾದಾಗ ನಾಡಿನಲ್ಲಿ ಬತ್ತಿಹೋಗಿರುವ ಏಕತೆಯ ನದಿಗಳು ಮತ್ತೆ ಹರಿಯತೊಡಗುತ್ತವೆ.

80ರ ದಶಕದಲ್ಲಿ ಕರ್ನಾಟಕದಲ್ಲಿ ಆರಂಭಗೊಂಡ ರೈತಚಳವಳಿ ಸರಳ ವಿವಾಹಗಳನ್ನು ಕೈಗೆತ್ತಿಕೊಂಡಿತು. ಇದರಿಂದಾಗಿ ನಮ್ಮ ಹಳ್ಳಿಗಾಡಿನ ಮಧ್ಯಮವರ್ಗದ ರೈತರು ಮತ್ತು ಜನಸಾಮಾನ್ಯರ ಕುಟುಂಬಗಳು ಸಾಲದ ಸುಳಿಗೆ ಸಿಲುಕದೆ ಪಾರಾದವು. ಜನಸಾಮಾನ್ಯರು ಅದ್ದೂರಿ ವೆಚ್ಚಗಳಿಲ್ಲದ, ಯಾರಿಗೂ ಹೊರೆಯಾಗದ ಮದುವೆಗಳನ್ನು ತುಂಬುಘನತೆಯಿಂದ ನಡೆಸತೊಡಗಿದರು. ಈಗಲೂ ಇಂತಹ ಸರಳ ವಿವಾಹಗಳನ್ನು ಚಳವಳಿಯ ರೂಪದಲ್ಲಿ ಮುಂದುವರೆಸುವ ಅನಿವಾರ್ಯತೆ ಇದೆ. ನಿಜಕ್ಕೂ ಇದೊಂದು ಕಲ್ಯಾಣ ಕರ್ನಾಟಕದ ಮಾದರಿ.

ಸಾರ್ವಜನಿಕ ಜೀವನದಲ್ಲಿ ಇರುವ ಕಲ್ಲುಹೃದಯದವರಿಗೆ ನಮ್ಮ ದೇಶದ ಭವಿಷ್ಯದ ಮಕ್ಕಳು ಹಸಿವಿನಿಂದ ನರಳುತ್ತಿರುವ ಸಂಗತಿಯೇ ಮುಖ್ಯವೆನಿಸುತ್ತಿಲ್ಲ! ಹಸಿದ ಹೊಟ್ಟೆಯಲ್ಲಿರುವ ಮಕ್ಕಳನ್ನು ನಿದ್ರಾದೇವಿ ಸುಲಭವಾಗಿ ಆವರಿಸಿಕೊಳ್ಳುತ್ತಾಳೆ. ಆಗ ಆ ನತದೃಷ್ಟ ಮಕ್ಕಳು ನಿದ್ದೆಯಲ್ಲಿ ಬಣ್ಣ ಬಣ್ಣದ ಕನಸುಗಳನ್ನು ಕಾಣತೊಡಗುತ್ತಾರೆ. ಕನಸುಗಳಲ್ಲಿ ವಿವಿಧ ಭಕ್ಷ್ಯ ಭೋಜನಗಳು ತುಂಬಿದ ಹರಿವಾಣಗಳು ಅವರ ಮುಂದೆ ತೇಲಿ ಬರುತ್ತವೆ. ಆಗ ಅವರ ಬಾಯಲ್ಲಿ ನೀರೂರುತ್ತದೆ. ಕನಸೊಡೆದಾಗ ಅವರು ಎಚ್ಚರಗೊಳ್ಳುತ್ತಾರೆ. ಆಗ ಅವರ ಕಣ್ಣುಗಳಲ್ಲಿ ಬೆಂಕಿಯ ನದಿಗಳು ಹರಿಯತೊಡಗುತ್ತವೆ. ತಮ್ಮ ಹಸಿವಿಗೆ ಸ್ಪಂದಿಸದವರ ಕಲ್ಲೆದೆಯ ಬಾಗಿಲನ್ನು ತಟ್ಟಿ ಕೇಳುತ್ತಾರೆ, ಬಡವರ ‘ತುತ್ತಿನ ಚೀಲ’ಕ್ಕೆ ಅನ್ನ ಕೊಡಿ. ಆದರೆ ಈಗಿನವರ ಬಣ್ಣದ ಮಾತಿನ ಅಬ್ಬರದಲ್ಲಿ ಅವರ ಭಾವನೆಗಳನ್ನು, ಒಡಲಿನ ಬಯಕೆಗಳನ್ನು ಹೇಳಲೂ ಆಗದಂತೆ ಅವರ ಭಾಷೆ ಹೆಪ್ಪುಗಟ್ಟಿದೆ. ಈಗ ವಿವೇಕಾನಂದರ ಮಾತುಗಳು ನೆನಪಾಗುತ್ತಿವೆ, ‘ದೇವರನ್ನು ಅರಸುತ್ತಾ ಎಲ್ಲಿಗೆ ಹೋಗುವಿರಿ? ಬಡವನ ಆರ್ತ ಹೃದಯ, ದುರ್ಬಲರಲ್ಲಿ ದೇವರಿಲ್ಲವೆ? ಮೊದಲು ಅವರನ್ನೇಕೆ ಆರಾಧಿಸಬಾರದು?’

ಅವರಿಗೆ ಬಡಿದಿರುವ ಅಧಿಕಾರ ಮತ್ತು ಸಿರಿಗರದ ಹುಚ್ಚುಹೊಳೆಯಲ್ಲಿ ಹಸಿದವರ ಕನಸುಗಳು ಕೊಚ್ಚಿಹೋಗುತ್ತಿವೆ. ಇಂತಹ ಕಟು ವಾಸ್ತವದ ಬಗ್ಗೆ ಸ್ವಾತಂತ್ರ್ಯ ಪೂರ್ವದಲ್ಲೇ ಗಾಂಧೀಜಿ ‘ಒಪ್ಪೊತ್ತಿನ ಊಟದಿಂದ ತೃಪ್ತಿಪಟ್ಟುಕೊಳ್ಳಬೇಕಾದ ಜನ ಭಾರತದಲ್ಲಿ ಮೂವತ್ತು ಲಕ್ಷ ಇದ್ದಾರೆ; ಆ ಊಟವೋ, ಜಿಡ್ಡಿನ ಮುಖವನ್ನೇ ಕಾಣದ ಒಂದು ಚಪಾತಿ, ಒಂದು ಚಿಟಿಕೆ ಉಪ್ಪು. ಈ ಮೂವತ್ತು ಲಕ್ಷ ಜನರಿಗೆ ಉತ್ತಮ ಆಹಾರ ವಸ್ತುಗಳನ್ನು ಒದಗಿಸುವವರೆಗೆ, ನನಗೂ ನಿಮಗೂ ನಮ್ಮಲ್ಲಿರುವ ಯಾವ ವಸ್ತುವಿನ ಮೇಲೂ ಹಕ್ಕಿಲ್ಲ’ ಎಂದು ಕಟು ನುಡಿಗಳಿಂದ ಎಚ್ಚರಿಸಿದ್ದರು. ಇಂದು ಬಡವರನ್ನು ನಿರ್ಲಕ್ಷಿಸುವ ಸಂವೇದನಾ ಶೂನ್ಯತೆಯಿರುವವರನ್ನು ಹಸಿದ ಹೊಟ್ಟೆಗಳು ಹತಾಶೆಯಿಂದ ನೋಡುತ್ತಿದ್ದೇವೆ. ತಮ್ಮ ಮಾತುಗಳನ್ನು ಮುಂದುವರಿಸಿದ ಗಾಂಧೀಜಿ, ‘ಶ್ರೀಮಂತರ ಮತ್ತು ಹಸಿದ ಲಕ್ಷಾಂತರ ಜನರ ನಡುವೆ ಅಗಾಧವಾದ ಅಂತರ ಇರುವವರೆಗೆ ಆರ್ಥಿಕ ಅಸಮಾನತೆಯನ್ನು ಹೋಗಲಾಡಿಸಲಾಗದು’ ಎಂದು ನುಡಿದಿದ್ದರು.

ಭಾರತದಲ್ಲಿ ಯಾವ ಜೀವಿಯೂ ಹಸಿವಿನಿಂದ ಇರಬಾರದು ಎಂಬುದು ಗಾಂಧೀಜಿಯ ಆದರ್ಶವಾಗಿತ್ತು. ಹಸಿದವರ ತುತ್ತಿನ ಚೀಲವನ್ನು ತುಂಬಿಸುವ ಈ ಚಿಂತನೆಗಳನ್ನು ಅನುಷ್ಠಾನಗೊಳಿಸಲು ಸಂಕಲ್ಪ ಶಕ್ತಿ ಇರುವ ಯಾವುದೇ ಸರ್ಕಾರಕ್ಕೂ ಅಸಾಧ್ಯವಾದ ಕಾರ್ಯವೇನಲ್ಲ! ಆಗ ಬಡವರ ಗುಡಿಸಿಲಿನ ಗರಿಗಳ ಮೇಲೆ ವಸಂತ ಇಳಿಯುತ್ತದೆ, ಹಸಿದ ಮಕ್ಕಳ ಕಣ್ಣುಗಳಲ್ಲಿ ನಕ್ಷತ್ರಗಳ ಬೆಳಕು ಹೊಳೆಯುತ್ತದೆ.

■ **ಜಿ.ವಿ. ಆನಂದಮೂರ್ತಿ**

## ಮಾತೇ ಮುತ್ತು

- ಡಾಕ್ಟರ್ ಸುತ್ತ ರೋಗಿಗಳೇ ಇರುವಂತೆ ಒಳ್ಳೆಯವರ ಸುತ್ತ ಕೆಟ್ಟವರೇ ಇರುತ್ತಾರೆ.
  —ಬೀಚಿ
- ನನ್ನ ನೋವು ಇನ್ನೊಬ್ಬರ ನಗುವಿಗೆ ಕಾರಣವಾಗಬಹುದು, ಆದರೆ ನನ್ನ ನಗು ಯಾವತ್ತೂ ಇನ್ನೊಬ್ಬರ ಸಂಕಟಕ್ಕೆ ಕಾರಣವಾಗಬಾರದು.
  —ಚಾರ್ಲಿ ಚಾಪ್ಲಿನ್
- ಮನುಕುಲಕ್ಕೆ ದೊರಕಿರುವ ಅತ್ಯಂತ ಶ್ರೇಷ್ಠ ಆಶೀರ್ವಾದವೆಂದರೆ ಹಾಸ್ಯ.
  —ಮಾರ್ಕ್ ಟ್ವೈನ್
- ನಾನು ಪ್ರೀತಿಗೆ ಅಂಟಿಕೊಳ್ಳಲು ನಿರ್ಧರಿಸಿದ್ದೇನೆ. ದ್ವೇಷದ ಹೊರೆಯನ್ನು ಹೊರುವುದು ಸಾಧ್ಯವಿಲ್ಲ.
  —ಮಾರ್ಟಿನ್ ಲೂಥರ್ ಕಿಂಗ್ ಜೂನಿಯರ್
- ಎಲ್ಲ ಕೆಡುಕುಗಳಿಗೂ ವಿಜ್ಞಾನ ಔಷಧ ಕಂಡುಹಿಡಿಯಬಹುದು, ಆದರೆ ಮನುಷ್ಯನ ಪಕ್ಷಪಾತದ ರೋಗಕ್ಕೆ ಔಷಧವಿಲ್ಲ.
  —ಹೆಲೆನ್ ಕೆಲ್ಲರ್
- ನಾಣ್ಯಗಳು ಸದ್ದು ಮಾಡುತ್ತವೆ. ಆದರೆ ನೋಟುಗಳಲ್ಲ. ನಮ್ಮೊಳಗಿನ ವಿವೇಕ ಹೆಚ್ಚಿದಂತೆಲ್ಲಾ ಮನಸ್ಸು ಶಾಂತವಾಗುತ್ತದೆ.
  —ಸಿದ್ಧೇಶ್ವರ ಸ್ವಾಮೀಜಿ